3.	ಎಂ.ಎ. ರುಬ್ಬಾನಿ ಬಿನ್ ಲೇಟ್ ಭಕ್ಷಿ ಚನ್ನಪಟ್ಟಣ	ಭಕ್ಷಿ	03-10-90	13-07-1993
4.	ಗೌಸ್ ಬೇಗ್ ಬಿನ್ ಬೇಗ್ ಹುಸೇನ್ ಚನ್ನಪಟ್ಟಣ	ಮುನಿರಾಬೇಗಂ ಮತ್ತು ಅಫಿಜುಲ್ಲಾ ಷರೀಫ್	03-10-90	07-07-1993
5.	ಮಹಮ್ಮದ್ ಖಲೀಮ್ ಕೇರ್ ಆಫ್‌ಅರಫ್ಖಾನ್ ಚನ್ನಪಟ್ಟಣ	ಮಹಮ್ಮದ್ ಅಮೀರ್	03-10-90	07-07-1993
6.	ಅಲೀಮ್ ಪಾಷಾ ಬಿನ್ ಮಕ್ಬೂಲ್ ಜಾನ್	ಮಹಮ್ಮದ್ ಖಾಸಿಂ	15-10-90	06-07-1993
7.	ಅಬ್ದುಲ್ ಅಜೀಜ್ ಕೇರಾಫ್ ಷರೀಫ್ ಕೋಂ ಲೇಟ್ ಸಿಖಿಂದರ್ ಖಾನ್	ಸಿಕಂದರ್ ಖಾನ್	03-10-90	30-06-1993
8.	ನವಾಬುಲ್ಲಾ ಖಾನ್ ಕೇರಾಫ್ ಬುದಾನ್ ಸಾಬ್	ಖೈರುನ್ ಬೀ	03-10-1990	29-06-1993

ಶ್ರೀ ಸಾದತ್ ಅಲಿ ಖಾನ್ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಕರ್ನಾಟಕ ರಾಜ್ಯದಲ್ಲಿ ನವೆಂಬರ್ ಮತ್ತು ಡಿಸೆಂಬರ್ 90ರಲ್ಲಿ 74 ಜನ ಸತ್ತಿದ್ದಾರೆ ಎಂದು ಹೇಳಿದ್ದಾರೆ. ಇದರಲ್ಲಿ ರಾಮನಗರ ಮತ್ತು ಚನ್ನಪಟ್ಟಣಗಳಲ್ಲಿ 27 ಜನ ಸತ್ತಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್ ರವರು ಅಕ್ಟೋಬರ್‌ನಲ್ಲಿ ಏನು ಹೇಳಿದರು ಅಂದರೆ 3 ತಿಂಗಳಲ್ಲಿ ಸತ್ತಿರತಕ್ಕ ಕುಟುಂಬವರ್ಗದವರ ಪೈಕಿ ಒಬ್ಬರಿಗೆ ಒಂದು ಕೆಲಸ ಕೊಡುತ್ತೇವೆ ಎಂದು. ಆದರೆ ಅದನ್ನು ಕೊಡಲಿಲ್ಲ. ಅನಂತರ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಗಳಾದರು. ಅವರೂ ಸಹ ಚನ್ನಪಟ್ಟಣದಲ್ಲಿ ಪೀಸ್ ಕಮಿಟಿ ಮೀಟಿಂಗ್ನಲ್ಲಿ ಒಂದು ತಿಂಗಳಿನಲ್ಲಿ ಮೃತಪಟ್ಟ ಕುಟುಂಬವರ್ಗದವರ ಪೈಕಿ ಒಬ್ಬರಿಗೆ ಕೆಲಸ ಕೊಡುವುದಾಗಿ ಹೇಳಿದೇರು; ಅದು ಸಹ ಜಾರಿ ಆಗಲಿಲ್ಲ. ಈಗ 8 ಜನರ ಅರ್ಜಿಗಳ ಪಟ್ಟಿಯನ್ನು ರಾಮನಗರ ಮತ್ತು ಚನ್ನಪಟ್ಟಣಕ್ಕೆ ಸಂಬಂಧಪಟ್ಟಹಾಗೆ ಕೊಟ್ಟಿದ್ದೀರಿ. ಆದರೆ ಅಲ್ಲಿ ಒಟ್ಟು 27 ಜನ ಸತ್ತು ಹೋಗಿದ್ದಾರೆ. ಈ 27 ಜನರ ಕುಟುಂಬವರ್ಗದವರ ಪೈಕಿ ಒಬ್ಬರಿಗೆ ಒಂದು ಕೆಲಸವನ್ನು ಕೊಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ತಡವಾಗಿದೆ. ಅದನ್ನು ನಾನೂ ಒಪ್ಪುತ್ತೇನೆ. ದಿನಾಂಕ 28-01-94ರಂದು ನಾವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 93 ಅನ್ನು ತಿದ್ದುಪಡಿ ಮಾಡಿ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಆದುದರಿಂದ ನಾವು ತಕ್ಷಣ ಇದರ ಬಗ್ಗೆ ಕ್ರಮ ಕೈಗೊಂಡು ವಿಲೇವಾರಿ ಮಾಡುತ್ತೇವೆ.

ಶ್ರೀ ಸಾದತ್ ಅಲಿ ಖಾನ್ : ಈಗಾಗಲೇ 3 ವರ್ಷ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : 28-01-94ರಂದು ಅಂದರೆ ಕಳೆದ ತಿಂಗಳು ನಾವು ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಈಗ ನಿಯಮಗಳು ಯಾವುದೂ ಬಾಧಕ ಬರುವುದಿಲ್ಲ. ಒಂದು ತಿಂಗಳಲ್ಲಿ ಅಥವಾ ಅದರೊಳಗೆ ಇದನ್ನು ತೀರ್ಮಾನ ಮಾಡುತ್ತೇನೆ.

ಶಿಥಿಲಗೊಂಡಿರುವ ಕಟ್ಟಡಗಳ ದುರಸ್ತಿ

325 - ಶ್ರೀ ಪಿ. ಬಸವರಾಜ್ (ಬ್ರಹ್ಮವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಕೋಟಾ ಪೋಲೀಸ್ ಠಾಣೆ ಕಟ್ಟಡ ಶಿಥಿಲಗೊಂಡಿರುವುದು ನಿಜವಲ್ಲವೇ? ಶಿಥಿಲವಾಗಿದ್ದು, ಅದನ್ನು ದುರಸ್ತಿಗೊಳಿಸಲು ಪೊಲೀಸ್ ಇಲಾಖೆಯು ಕೈಗೊಂಡ ಕ್ರಮಗಳೇನು?

ಆ) ಗಿಳಿಯೂರು ಗ್ರಾಮದ ಸರ್ವೆ ನಂ. 244:1ಎ ರಲ್ಲಿ ಸದರಿ ಪೊಲೀಸ್ ಠಾಣೆಯ ನವೀಕರಣ ಕುರಿತ ಪ್ರಸ್ತಾವನೆಯ ಗೃಹ ಇಲಾಖೆಗೆ ಬಂದಿದೆಯೇ? (ವಿವರ ನೀಡುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಕಟ್ಟಡವು ಶಿಥಿಲವಾಗಿಲ್ಲ.

ಆ) ಹೌದು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ನನ್ನ ಮತದಾರ ಕ್ಷೇತ್ರವಾದ ಕೋಟಾ ಪೊಲೀಸ್ ಠಾಣೆಯ ಕಟ್ಟಡ ಶಿಥಿಲವಾಗಿದೆ. ಅದನ್ನು ದುರಸ್ತಿಗೊಳಿಸಲು ಹಣವನ್ನು ಸರ್ಕಾರ ಖರ್ಚು ಮಾಡಲು ಆಗುವುದಿಲ್ಲ. ಏತಕ್ಕೆಂದರೆ ಅದು ಬಾಡಿಗೆ ಕಟ್ಟಡವಾಗಿದೆ. ಈ ಪೊಲೀಸ್ ಠಾಣೆಗೆ ಸ್ವಂತ ಕಟ್ಟಡವನ್ನು ಕಟ್ಟಲು ಏತಕ್ಕೆ ಕ್ರಮ ಕೈಗೊಳ್ಳಬಾರದು?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ತಮ್ಮ ಮೊದಲನೆ ಪ್ರಶ್ನೆ ಎಂದರೆ ಈ ಪೊಲೀಸ್ ಠಾಣೆ ಕಟ್ಟಡ ಶಿಥಿಲವಾಗಿದೆ ಎಂದು. ಅದು ಶಿಥಿಲ ಆಗಿಲ್ಲವೆಂದು ಉತ್ತರ ಕೊಟ್ಟಿದ್ದೇನೆ. ಈಗ ಈ ಪೊಲೀಸ್ಠಾಣೆಗೆ ಹೊಸ ಜಾಗ ಸಿಕ್ಕಿದೆ. ಅದು ಪೊಲೀಸ್ ಇಲಾಖೆಯವರ ವಶದಲ್ಲಿ ಇದೆ. ಆದುದರಿಂದ ಹೊಸ ಕಟ್ಟಡ ನಿರ್ಮಾಣವನ್ನು 1994-95ರಲ್ಲಿ ನಾವು ಮಂಜೂರು ಮಾಡುತ್ತೇವೆ.

ಶ್ರೀ ಪಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ಬಾಡಿಗೆ ಕಟ್ಟಡದ ಓನರ್ ಕಟ್ಟಿಕೊಡಲಿಕ್ಕೆ ರೆಡಿಯಾಗಿದ್ದಾರೆ. ಈಗ ಸ್ವಂತ ಜಾಗ ಪೋಲೀಸ್ ಠಾಣೆಗೆ ಸ್ಯಾಂಕ್ಷನ್ ಆಗಿದೆ. ಅಲ್ಲಿ ಕಟ್ಟಡ ಕಟ್ಟಲಿಕ್ಕೆ ಈಗ ಓನರ್ ಯಾರು ಇದ್ದಾರೆ ಅವರು ಮುಂದೆ ಬಂದಿದ್ದಾರೆ ಆ ಜಾಗದಲ್ಲಿ ಕಟ್ಟಿಸಿ ಕೊಡುತ್ತೇನೆ. ನೀವು ಈ ಕಟ್ಟಡ ಬಿಟ್ಟು ಕೊಡಿ ಎಂದು ಕೇಳುತ್ತಾ ಇದ್ದಾರೆ. ಅದೂ ಅವರು ಕೇಳುತ್ತಿಲ್ಲ. ಈಗ ಪ್ರೊಪೋಜಲ್ ಡಿ.ಐ.ಜಿ. ಆಫೀಸಿಗೆ ಬಂದಿದೆ. ಆದುದರಿಂದ ಏಕೆ ತಾವು ಇದಕ್ಕೆ ಒಪ್ಪಿಗೆ ಕೊಟ್ಟು ಕಟ್ಟಡ ಕಟ್ಟಿಸಿಕೊಳ್ಳಬಾರದು ಎಂದು ನಾನು ಕೇಳುತ್ತೇನೆ.

ಶ್ರೀಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಖಾಸಗಿ ಕಟ್ಟಡಕ್ಕೆ ಹೋಗುವ ಬದಲು ಹೊಸದಾಗಿ ನಮ್ಮ ಸರ್ಕಾರವೇ ಕಟ್ಟಡ ಕಟ್ಟಿಸುತ್ತದೆಂದು, ನಾನು ಹೇಳುತ್ತಾ ಇದ್ದೇನೆ.

ಉಚ್ಚನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಪ್ರಕರಣಗಳು

48 - ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1993ನೇ ಡಿಸೆಂಬರ್ ಅಖೈರುವರೆಗೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಎಷ್ಟು ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿರುವುದು.

ಆ) ಅವುಗಳಲ್ಲಿ ಕ್ರಿಮಿನಲ್ ಹಾಗೂ ಸಿವಿಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಇ) ಶೀಘ್ರ ನ್ಯಾಯ ದೊರೆಯುವುದಕ್ಕಾಗಿ ಬೇಗನೆ ಇತ್ಯರ್ಥಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):